ಶ್ರೀ ಪಂಪಾಪತಿ.—ಈಗ ಹೊಸದಾಗಿ ರೈಲ್ವೆ ಲೈನನ್ನು ಹಾಕುವುದರ ಜೊತೆಗೆ ಇರತಕ್ಕ ರೈಲುಗಳು ಸಮಯಕ್ಕೆ ಸರಿಯಾಗಿ ಬರುತ್ತಿಲ್ಲ ಕೇಂದ್ರದಲ್ಲಿ ನಮ್ಮವರೇ ರೈಲ್ವೆ ಮಂತ್ರಿಗಳಾಗಿರುವ ಸಮಯಕ್ಕೆ ಸರಿಯಾಗಿ ರೈಲುಗಳು ಬರುವ ವ್ಯವಸ್ಥೆ ಮಾಡುವಿರಾ?

ಶ್ರೀ ಆರ್. ಗುಂಡೂರಾವ್.—ಆ ಪ್ರಶ್ನೆ ಇಲ್ಲಿ ಉದ್ಭವವಾಗುವುದಿಲ್ಲ.

Chakra Dam project in Shimoga District

301 SRI ANAND KUNDA HEGDE (Bramhavar).—Will the Chief Minister be pleased to state.—

(a) whether it is a fact that earthen dam in Chakra Project (Chakra Savehaklu) of Shimoga District has been breached;

(b) whether it is a fact that cement supplied to Chakra Savehaklu and Varahi project work in the said district is being transported out side the District.

SRI R. GUNDU RAO (Chief Minister).—

(a) No But Central wall and stones in left bank portion of small dam with a stone wall at the source of the Chakra river have been scoured out due to heavy floods during rainy season in 1979 Reasons for this sinking is being examined

(b) No

ಶ್ರೀ ಆನಂದಕುಂದ ಹೆಗ್ಡೆ.—ಈ ಪ್ರಶ್ನೆಯು (ಅ) ಉತ್ತರವಾಗಿ ಇಲ್ಲ ಎಂದು ಹೇಳಿದ್ದೀರಿ. ನಾನು ಹೇಳುತ್ತೇನೆ ಈ ಚಕ್ರಾ ನದಿಯ ಭಾರಿ ಪ್ರವಾಹದಿಂದ ಉಕ್ಕಿ ಹರಿದು ಚಕ್ರಾ ನದಿಯ ಮೂಲದಲ್ಲಿ ಹಾಕಿರುವ ಕಲ್ಲಿನ ಗೋಡೆಗಳುಳ್ಳ ಸಣ್ಣ ಅಣೆಕಟ್ಟಿನ ಎಡದಂಡೆ ಭಾಗದಲ್ಲಿರುವ ಮಧ್ಯದ ಗೋಡೆ ಹಾಗೂ ಕಲ್ಲುಗಳು ಏನು ಕೊಚ್ಚಿಕೊಂಡು ಹೋಗಿವೆ, ಮತ್ತು ಇದರಲ್ಲಿ ಏನು ಕುಸಿದಿದೆ ಇದಕ್ಕೆ ಎಷ್ಟು ಮೇಟ್‌ನಲ್ಲಿರುವ ದೋಷವೇ ಕಾರಣ ಎಂದು ಹೇಳುತ್ತೇನೆ. ಆದುದರಿಂದ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ತಾವು ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಾ ಅನ್ನುವುದನ್ನು ಹೇಳುತ್ತೀರಾ

ಎರಡನೆಯದಾಗಿ ಈ ಪ್ರಾಜೆಕ್ಟ್‌ಗೆ ಬರತಕ್ಕಂಥಾ ಸಿಮೆಂಟ್ ಏನು ಇದೆ ಅದು ಬೇರೆ ಕಡೆ ಹೋಗುತ್ತಾ ಇದೆ, ಅದು ದುರುಪಯೋಗವಾಗುತ್ತಾ ಇದೆ, ಈ ಬಗ್ಗೆಯೂ ಸಹ ನಾನು ಪ್ರಶ್ನೆ ಕೇಳಿದ್ದೆ ಅದಕ್ಕೆ ಇಲ್ಲಾ ಎಂದು ಹೇಳಿದ್ದೀರಿ. ಈಗಲಾದರೂ ಅದಕ್ಕೆ ಸರಿಯಾದ ಉತ್ತರ ಕೊಡುತ್ತೀರಾ?

ಶ್ರೀ ಆರ್. ಗುಂಡೂರಾವ್.—ತಪ್ಪು ಮೊದಲನೆಯ ಪ್ರಶ್ನೆಗೆ ಪರಿಶೀಲಿಸಲಾಗುತ್ತಿದೆ ಎಂದು ನಾನಾ ಮೊದಲೇ ಉತ್ತರ ಕೊಟ್ಟಿದ್ದೇನೆ. ಇನ್ನು ಎರಡನೆಯದಾಗಿ ಇಲ್ಲಿಗೆ ಬರ ತಕ್ಕಂಥಾ ಸಿಮೆಂಟ್ ಬೇರೆ ಕಡೆಗೆ ಹೋಗುತ್ತಾ ಇದೆ, ದುರುಪಯೋಗವಾಗುತ್ತಾ ಇದೆ ಎಂದು ಕೇಳಿದ್ದಕ್ಕೆ, ಇಲ್ಲಾ ಎಂದು ನಾನು ಆಗಲೇ ಉತ್ತರ ಕೊಟ್ಟಿದ್ದೇನೆ. ಜೊತೆಗೆ ಬೇರೆ ಕಡೆ ಹೋಗುತ್ತಾ ಇದ್ದಂಥಾ ೨೦೦ ಮೂಟೆ ಸಿಮೆಂಟ್ ಅನ್ನು ಪೋಲೀಸಿನವರು ಹಿಡಿದಿದ್ದಾರೆ. ಆದರೆ ಆ ಸಿಮೆಂಟ್ ಈ ಪ್ರಾಜೆಕ್ಟ್‌ಗೇನೇ ಬಂದಂಥಾ ಸಿಮೆಂಟೋ ಅಥವಾ ಖಾಸಗಿಯವರಿಗೆ ಸೇರಿದ ಸಿಮೆಂಟೇ ಎನ್ನುವುದು ವಿಚಾರಣೆಯ ಹಂತದಲ್ಲಿದೆ. ಈಗ ಯಾವುದನ್ನು ಹೇಳುವುದಕ್ಕಾಗುವುದಿಲ್ಲಾ. ತಾವು ಪ್ರತ್ಯೇಕವಾಗಿ ಸೂಕ್ತ ಉದಾಹರಣೆ ಕೊಟ್ಟು ತಿಳಿಸಿದರೆ ಆ ಬಗ್ಗೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎ. ಜಿ. ಕೊಡ್ಗಿ.—ಈ ಚಕ್ರಾ ನದಿಯು ಭಾರಿ ಪ್ರವಾಹದಿಂದ ಉಕ್ಕಿ ಹರಿದು ಚಕ್ರಾ ನದಿಯ ಮೂಲದಲ್ಲಿ ಹಾಕಿರುವ ಗೋಡೆಗಳುಳ್ಳ ಸಣ್ಣ ಅಣೆಕಟ್ಟಿನ ಎಡದಂಡೆ ಭಾಗದಲ್ಲಿರುವ ಮಧ್ಯದ

ಗೋಡೆ ಹಾಗೂ ಕಲ್ಲುಗಳು ಕೊಚ್ಚಿಕೊಂಡು ಏನು ಕಂಸಿದುಹೋಗಿದೆ ಇದಕ್ಕೆ ೧೧ ಲಕ್ಷ ರೂಪಾಯಿ ಯನ್ನು ಖರ್ಚು ಮಾಡಿದ್ದೀರಿ. ಈಗ ಮತ್ತೆ ಪುನ: ಅದೇ ಕುಂದಾಪುರದಲ್ಲಿರುವ ಒಬ್ಬ ಕಂಟ್ರಾಕ್ಟರಿಗೆ ೮ ಲಕ್ಷ ರೂಪಾಯೀಗೆ ಈ ಕೆಲಸ ಮಾಡುವುದಕ್ಕೆ ಕೊಟ್ಟಿದ್ದೀರಿ. ಈ ಬಗ್ಗೆ ಸ್ಪಷ್ಟವಾದ ವಿಚಿತವಾದ ಉತ್ತರ ಕೊಡುತ್ತೀರಾ ಬೇಕಾದರೆ ಇದರ ವಿವರಣೆಯನ್ನು ಸಹ ಎಲ್ಲವನ್ನೂ ಕೊಡಬಲ್ಲೆ?

ಇನ್ನು ಎರಡನೆಯದಾಗಿ ಈ ಪ್ರಾಜೆಕ್ಟ್‌ಗೆ ಬರತಕ್ಕಂಥಾ ಸಿಮೆಂಟ್ ಹೊರಗೆ ಸಾಗುತ್ತಿರುವುದು ನಿಜವೇ ಎಂದು ಕೇಳಿದ್ದಕ್ಕೆ 'ಇಲ್ಲಾ, ಎಂದು ಹೇಳಿದ್ದೀರಿ. ನಾನು ಹೇಳುತ್ತೇನೆ ಈ ವರಾಹಿ ಪ್ರಾಜೆಕ್ಟ್‌ಗೆ ಬಂದಂಥಾ ಸಿಮೆಂಟ್ ಅನ್ನು ಕುಂದಾಪುರದ ವ್ಯಾಪ್ತಿಯಲ್ಲಿ ಪೋಲೀಸಿನವರು ಹಿಡಿದಿದ್ದಾರೆ. ಅವರು ಲಾರಿಯನ್ನು ಹಿಡಿದು ಕೇಸ್ ಮಾಡಿದ್ದೂ ಇದೆ. ಬೇಕಾದರೆ ಆ ಲಾರಿ ನಂಬರು ಮತ್ತು ಯಾವ ತಾರೀಕಿನಲ್ಲಿ ಹಿಡಿದರು ಅನ್ನುವ ವಿವರಣೆಯನ್ನು ತಂದುಕೊಡುತ್ತೇನೆ. ನೀವು ಈ ಪ್ರಶ್ನೆಗೆ ಉತ್ತರ ವಾಗಿ 'ಇಲ್ಲಾ ಎಂದು ಹೇಳಿದ್ದೀರಿ. ಇದಕ್ಕೆ ಬರತಕ್ಕಂಥಾ ಸಿಮೆಂಟ್ ದುರುಪಯೋಗವಾಗುತ್ತಾ ಇದೆ ಅನ್ನುವುದಕ್ಕೆ ಸಾಕಷ್ಟು ಸಾಕ್ಷಿ ಆಧಾರಗಳು ಇವೆ, ನಿಮಗೆ ಬೇಕಾದರೆ ಕೊಡಬಲ್ಲೆ. ಈಗಲಾದರೂ ಇದಕ್ಕೆ ಗಮನ ಕೊಟ್ಟು ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಆರ್. ಗುಂಡೂರಾವ್.—ನಾನು ಈ ಪ್ರಶ್ನೆಯಲ್ಲಿ ಸ್ಪಷ್ಟವಾಗಿ ಉತ್ತರ ಕೊಟ್ಟಿದ್ದೇನೆ 'ಇಲ್ಲ ಎಂದೂ, ಮಾನ್ಯ ಸದಸ್ಯರು ಇಂಥಾ ಕಡೆ ದುರುಪಯೋಗವಾಗಿದೆ. ಹೀಗಾಗುತ್ತಾ ಇದೆ ಎಂದು ತಿಳಿಸಿದರೆ ಅದರ ಬಗ್ಗೆ ಸೂಕ್ತ ವಿಚಾರಣೆ ಮಾಡಿ ತಪ್ಪಿತಸ್ಥರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

Permanent Solution of Water Supply for Gulbarga City

367 SRI QUAMARUL ISLAM (Gulbarga)—Will the Minister for Housing and Urban Development be pleased to state.

(a) out of the following three schemes ( ) Bhima River, (2) Kagina River (3) Construction of Dam on Bennithora which of the above schemes is sanctioned as a Permanent solution of water supply for Gulbarga City;

(b) the progress of such scheme and stage,

(c) if one of the above such scheme is not yet sanctioned, what is the reason for delay?

SRI DHARM SINGH (Minister for Housing and Urban Development)

(a) III stage water supply scheme amounting to Rs. 456 lakhs with Bennithora river as source has been prepared by the Board. This is considered as a permanent source of water supply to Gulbarga City.

(b) The scheme is under submission to Government by the Board.

(c) The proposal will be examined by Government soon on receipt of the proposal from the Board.

SRI QUAMARUL ISLAM.—Sir, in order to solve the problem of water scarcity in Gulbarga City three schemes were before the Board They are (i) Bhima River, (2) Kagina River (3) Construction of Dam on Bennithora. Now, it is stated that III stage water supply